2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ : ಮೊರಾರ್ಜಿ ಶಾಲೆ ಹಾಗೂ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಇಲ್ಲದಿರುವುದರಿಂದ ಪ್ರಾರಂಭ ಮಾಡದಿರುವ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, 2011 ನವೆಂಬರ್ ತಿಂಗಳಲ್ಲಿ ಮೊರಾರ್ಜಿ ಮತ್ತು ವಾಜಪೇಯಿ ವಸತಿ ನಿಲಯಗಳ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರದಿಂದ ಆದೇಶವಾಗಿತ್ತು. ಅದಕ್ಕೆ ಆರ್ಥಿಕ ಇಲಾಖೆಯಿಂದಲೂ ಒಪ್ಪಗೆ ಸಿಕ್ಕಿತ್ತು. ಒಟ್ಟು 13 ಆ ರೀತಿ ಶಾಲೆಗಳು ಆಗಿದ್ದಾವೆ.

ನಮ್ಮ ಜಿಲ್ಲೆ ಮಡಿಕೇರಿ ತಾಲ್ಲೂಕಿನ ಭಾಗಮಂಡಲ ಬಹಳ ಮಳೆ ಬರುವಂತಹ ಸ್ಥಳ. ಒಮ್ಮೆ ಮಳೆ ಬಂತು ಅಂದರೆ,,

ಅಧ್ಯಕ್ಷರು : ಏನು ವಿಷಯ ಹೇಳಿ. ಯಾವ ಉದ್ದೇಶದಿಂದ ನೀವು ಪ್ರಸ್ತಾಪ ಮಾಡಿದ್ದೀರಿ ಎಂದು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ : ಆ ಶಾಲೆಗಳನ್ನು ಪ್ರಾರಂಭ ಮಾಡಿ ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿತ್ತು. ಸರ್ಕಾರದ ಆದೇಶದ ಪ್ರಕಾರ ಮಕ್ಕಳನ್ನೂ ಆಯ್ಕೆ ಮಾಡಿದ್ದಾರೆ.

ಅಧ್ಯಕ್ಷರು : ಶಾಲೆ ಪ್ರಾರಂಭ ಮಾಡಬೇಕಾ?

ಶ್ರೀ ಕೆ.ಜಿ. ಬೋಪಯ್ಯ : ಪ್ರಾರಂಭ ಮಾಡಿದ್ದಾರೆ. ಆದರೆ ಮೇ 31ನೇ ತಾರೀಖು ಸರ್ಕಾರ ಒಂದು ಆದೇಶ ಹೊರಡಿಸಿ ಹೊಸದಾಗಿ ಮಾಡಿದಂತಹ ಯಾವುದೇ ವಸತಿ ನಿಲಯ ಶಾಲೆಗಳನ್ನು ಪ್ರಾರಂಭ ಮಾಡಬಾರದು, ಇದಕ್ಕೆ ಕಾರಣ ಅಲ್ಲಿ ಮೂಲಭೂತ ಸೌಕರ್ಯ ಇಲ್ಲವೆಂದು ಹೇಳಿದ್ದಾರೆ. ನನ್ನ ಬೇಡಿಕೆ ಇಷ್ಟೆ. ಆಯಾ ಜಿಲ್ಲೆಗಳಿಂದ ಹೊಸದಾಗಿ ಪ್ರಾರಂಭವಾಗಿರುವ ಈ ಶಾಲೆಗಳಲ್ಲಿ ಅಲ್ಲಿ ಮೂಲಭೂತ ಸೌಕರ್ಯಗಳನ್ನು ಮಾಡಿದ್ದಾರಾ ಇಲ್ಲವೋ ಏನೂ ನೋಡದೆ. ಏಕಾಏಕಿ ನೋಡದೆ, ಏಕಾಏಕಿ ಈ ರೀತಿ ಮಕ್ಕಳ ಆಯ್ಕೆಗೆ ಎಲ್ಲದಕ್ಕೂ ಪ್ರಕ್ರಿಯೆ ಪ್ರಾರಂಭವಾದ ಮೇಲೆ ಈ ರೀತಿ ಶಾಲೆಗಳನ್ನು ಮುಚ್ಚುವಂಥದ್ದು ಸರಿಯೇ? ಈಗ ಮಕ್ಕಳ ಗತಿ ಏನು? ನಮ್ಮ ಜಿಲ್ಲೆಯಲ್ಲಿ ಒಟ್ಟು ಏಳು ಹಿಂದಿನ ಶಾಲೆಗಳಿವೆ. ಅದರಲ್ಲಿ ಎಲ್ಲದಕ್ಕೂ ಮೂಲಭೂತ ಸೌಕರ್ಯ

ಹಾಗೂ ಕಟ್ಟಡ ಇವೆ. ಹೊಸದಾಗಿ ಪ್ರಾರಂಭ ಮಾಡಿರುವುದಕ್ಕೆ 10 ಎಕರೆ ಜಾಗ ಗುರುತಾಗಿದೆ. ಅನುದಾನ ಬಿಡುಗಡೆ ಮಾಡುವುದಕ್ಕೆ ಆರ್ಥಿಕ ಇಲಖೆಯ clearance ಆಗಿದೆ. ಈಗ ಅಲ್ಲಿ ಹಳೆಯ ಕಟ್ಟಡದಲ್ಲಿ ಶಾಲೆ ಪ್ರಾರಂಭ ಮಾಡಿದ್ದೇವೆ ಈಗ ಶಾಲೆಗಳನ್ನು ಮುಚ್ಚುವಂತಹ ಕೆಲಸ ಮಾಡಿದರೆ ಹೇಗೆ? ಈ ಮಕ್ಕಳ ಗತಿ ಏನು?

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಅವರು ಅಲ್ಲಿ ಕಟ್ಟಡಗಳು ಇಲ್ಲ, ಇನ್ನೊಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ನಾನು ಹೇಳುವುದೇನೆಂದರೆ, ನೀವು ಆ ಜಿಲ್ಲೆಯ ಅಧಿಕಾರಿಗಳಿಂದ ವರದಿ ತರಿಸಿಕೊಳ್ಳಿ. ಭಾಗಮಂಡಲದಂತಹ ಪ್ರದೇಶದಲ್ಲಿ ಒಂದು ವಸತಿ ಶಾಲೆ ಇದೆ. ಮಳೆ ಆದರೆ ಯಾವ ಮಕ್ಕಳೂ ಹೋಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಬೋಪಯ್ಯನವರೇ, ಅವರು ಏನು ಮಾಡಿದ್ದಾರೆಂದು ನಿಮಗೆ ಹೇಳಿಕೆ ಕೊಟ್ಟಿದ್ದಾರೆ. ಇದು ನಿಮಗೆ ಸಮಾಧಾನ ಇಲ್ಲದೇ ಹೋದರೆ, ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಂಡು ಬನ್ನಿ.

ಶ್ರೀ ಕೆ.ಜಿ. ಬೋಪಯ್ಯ : ಇವರು ಏನು ಹೇಳಿದ್ದಾರೆ, ಇದೆಲ್ಲಾ ತಪ್ಪು ಮಾಹಿತಿಯಾಗಿದೆ.

ಅಧ್ಯಕ್ಷರು : ಹಾಗಿದ್ದರೆ ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಂಡು ಬನ್ನಿ ಉತ್ತರ ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಕ್ಕೆ ಉತ್ತರಕೊಟ್ಟಿದ್ದಾರೆ. If you are not happy with the reply, please give the notice in some other form.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ನಾನು ನಿಯಮ 69ರ ಕೆಳಗೆ ಮನವಿ ಕೊಡುತ್ತೇನೆ.

ಅಧ್ಯಕ್ಷರು : ಆಯಿತು, ಖಂಡಿತ ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ : ನೀವು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಶ್ರೀ ಕೆ.ಜಿ. ಬೋಪಯ್ಯ : ನೀವು ಶಾಲೆಯನ್ನು ಪ್ರಾರಂಭ ಮಾಡಿ. ಏಕೆ ಮುಚ್ಚುತ್ತೀರಿ?

ಅಧ್ಯಕ್ಷರು : ಆಯಿತು, ಅವಕಾಶ ಕೊಡುತ್ತೇನೆ. ಮಾನ್ಯ ಯು.ಬಿ. ಬಣಕಾರ್‌ರವರೂ ಕೊಟ್ಟಿದ್ದಾರೆ ಎರಡೂ ಸೇರಿಸಿ ಅವಕಾಶ ಕೊಡುತ್ತೇನೆ ಚರ್ಚೆ ಮಾಡಿ. ರಾಜಣ್ಣರವರೆ, ನಿಮ್ಮ ವಿಷಯ ಪ್ರಸ್ತಾಪ ಮಾಡಿ.

2. ವಿಷಯ : ಹೆಣ್ಣು ಮಕ್ಕಳ ಪಿ.ಯು ಕಾಲೇಜು ಸ್ಥಾಪಿಸುವ ಬಗ್ಗೆ.

ಶ್ರೀ ಕೆ.ಎನ್. ರಾಜಣ್ಣ (ಮಧುಗಿರಿ) : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಹೆಣ್ಣು ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗತಕ್ಕಂತಹ ಅವಕಾಶಗಳು ಹೆಚ್ಚಾಗಿವೆ. ಹೆಣ್ಣು ಮಕ್ಕಳ ಪಿ.ಯು. ಕಾಲೇಜು ಮತ್ತು ಆಂಧ್ರದ ಏನು ಗಡಿ ಭಾಗಗಳು ಇವೆ ಅಲ್ಲಿ Pre-University College ಗಳು ಇಲ್ಲದೆ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗತಕ್ಕಂತಹ ಅವಕಾಶವಿರುವುದರಿಂದ ಅಲ್ಲಿ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಈ ಒಂದು ಶೈಕ್ಷಣಿಕ ವರ್ಷದಿಂದಲೇ ಅಲ್ಲಿ ಶಾಲೆಗಳನ್ನು ಪ್ರಾರಂಭ ಮಾಡಿದರೆ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಬೇಕಾಗಿರತಕ್ಕಂತಹ ಕಟ್ಟಡ ಹಾಗೂ ಎಲ್ಲಾ infrastructure ಇದೆ. ಸರ್ಕಾರದ ಅನುಮತಿ ಬೇಕಾಗಿದೆ. ಆ ಕಾರಣದಿಂದ ಈ ಶೈಕ್ಷಣಿಕ ವರ್ಷದಿಂದ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆ ಎಂಬ ಆಶ್ವಾಸನೆ ಕೊಡಬೇಕು.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ನಾಳೆ ಬರುತ್ತಾರೆ, ಅವರಿಂದ ಹೇಳಿಕೆ ಕೊಡಿಸುತ್ತೇನೆ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಅವರು ಒಂದು ಮಾತು ಹೇಳಿದರೆ ನಮಗೆ ಅನುಕೂಲವಾಗುತ್ತದೆ. ತಾವು ಅವರಿಗೆ ನಿರ್ದೇಶನ ಕೊಡಬೇಕು.

ಅಧ್ಯಕ್ಷರು : ಸಂಬಂಧಪಟ್ಟ ಮಂತ್ರಿಗಳೇ ಬರುತ್ತಾರೆ. ಎಂ.ಟಿ. ಕೃಷ್ಣಪ್ಪನವರು ಇಲ್ಲ. ಶ್ರೀಮಾನ್ ಶಿವಶಂಕರ ರೆಡ್ಡಿಯವರು,

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ : ಮಾನ್ಯ ಅಧ್ಯಕ್ಷರೆ,